ನೋಡುತ್ತಿದ್ದರೆ ಪುರಾಣ ಕತೆಗಳ ಪುರುಷಪರ ಸಾಂಸ್ಕೃತಿಕ ರಾಜಕಾರಣ ಸ್ಪಷ್ಟವಾಗಿ ಹೊಳೆಯುತ್ತದೆ: ಸಾವಿತ್ರಿಯ ಕತೆಯಂತೆ ರುರು–ಪ್ರಮದಾ ಪ್ರೇಮಕತೆ ಭಾರತೀಯ ಸಂಸ್ಕೃತಿಯಲ್ಲಿ ಹಬ್ಬದಿರಲು ಪುರುಷಪ್ರಧಾನ ಸಂಕಥನ ಆಳುತ್ತಿದ್ದ ಸಾಂಪ್ರದಾಯಿಕ ಸಮಾಜವೂ ಕಾರಣವಾಗಿರಬಹುದು. ಜೊತೆಗೆ, ಸಾವಿತ್ರಿಯ ಕತೆ 'ಜನಪ್ರಿಯ'ವಾಗಲು ಪುರುಷ ಸಮಾಜದ ಬಯಕೆ, ನಿರ್ದೇಶನಗಳನ್ನು ಸ್ತ್ರೀ ಸಂಕುಲವೂ ತಲೆಯ ಮೇಲೆ ಹೊತ್ತು ಹೊರಟಿದ್ದು ಕೂಡ ಕಾರಣವಿರಬಹುದು.

* * *

ದ್ರೌಪದಿ, ಸಾವಿತ್ರಿಯರ ನಡುವೆ ದ್ರೌಪದಿಯೇ ಲೋಹಿಯಾರ ಆಯ್ಕೆಯಾಗಿದ್ದಳು.

'ದ್ರೌಪದಿಯಲ್ಲಿ ಹತ್ತಾರು ಗುಣಗಳಿವೆ; ಆದರೆ ಸಾವಿತ್ರಿಯ ಕತೆ ಸಾಗುವುದು ಒಂದೇ ಒಂದು ಅಂಶದ ಆಧಾರದ ಮೇಲೆ' ಎಂದ ಲೋಹಿಯಾ, ದ್ರೌಪದಿಯ ಬಗ್ಗೆ ಮೈದುಂಬಿ ಬರೆದರು:

'ಸುಮಾರು ನಲ್ವತ್ತು, ಐವತ್ತು ವಿಚಾರಗಳನ್ನು ಕುರಿತು ದ್ರೌಪದಿಯ ವಾಗ್ವಾದ, ಮಾತುಕತೆಗಳಿವೆ; ರಾಜಕೀಯ, ನ್ಯಾಯ, ಧರ್ಮದ ಸುತ್ತ ಈ ವಾಗ್ವಾದಗಳು ನಡೆಯುತ್ತವೆ. ಹೀಗೆ ಸಂವಾದ, ವಾಗ್ವಾದ ಮಾಡಿರುವ ಕೆಲವು ಮಹಿಳೆಯರು ಸಿಕ್ಕಬಹುದು. ಆದರೆ ದ್ರೌಪದಿಯಂತೆ ಇಷ್ಟೆಲ್ಲ ವಿಚಾರಗಳ ಮೇಲೆ ವಾಗ್ವಾದ ಮಾಡಿರುವ ಮಹಿಳೆ ಇನ್ನೊಬ್ಬಳಿಲ್ಲ.'

'ಪ್ರಪಂಚದ ಯಾವುದೇ ದೇಶದ ಯಾವುದೇ ಕಾಲದ ಯಾವೊಬ್ಬ ಮಹಿಳೆಯೂ ಅರಿವಿನಲ್ಲಿ, ತರ್ಕದಲ್ಲಿ, ಸೂಕ್ಷ್ಮದಲ್ಲಿ, ಧೈರ್ಯದಲ್ಲಿ ದ್ರೌಪದಿಯ ರೀತಿಯಿರುವುದು ಕಾಣುವುದಿಲ್ಲ. ಇವಳಷ್ಟು ಜ್ಞಾನಸಂಪನ್ನಳಾದ ಇನ್ನೊಬ್ಬ ಮಹಿಳೆಯಿಲ್ಲ. ತನ್ನ ಕಾಲದ ಪ್ರತಿ ಗಂಡಸನ್ನೂ ದ್ರೌಪದಿ ಸೂಕ್ಷ್ಮವಾದ ಮಾತುಕತೆಯಲ್ಲಿ ಸೋಲಿಸಿದಳು. ಅವಳು ಎಂಥ ಜ್ಞಾನಿ ಹಾಗೂ ತೀಕ್ಷ್ಣಮತಿಯೆಂದರೆ, ಅವಳ ಮುಂದೆ ಆ ಕಾಲದ ಯಾವ ಗಂಡೂ ಸಹ ನಿಲ್ಲಲಾಗುತ್ತಿರಲಿಲ್ಲ. ಕೃಷ್ಣ ಒಬ್ಬನಿದ್ದ. ಆದರೆ ಆಕೆ ಆತನೊಂದಿಗೆ ಮಾತಿಗಿಳಿಯುವ ಸಂದರ್ಭವಿರಲಿಲ್ಲ. ಕೃಷ್ಣ ಮತ್ತು ಕೃಷ್ಣೆಯರ ನಡುವೆ ಯಾವತ್ತೂ ಯಾವುದೇ ಬಗೆಯ ಪ್ರತಿಸ್ಪರ್ಧೆಯಿರಲಿಲ್ಲ.'

'ದ್ರೌಪದಿ ಮಹಾಭಾರತದ ಅತಿ ಮಹತ್ತರವಾದ ಮಹಿಳೆ' ಎನ್ನುವ ಲೋಹಿಯಾ, ಆಕೆಗೆ 'ಕೃಷ್ಣೆ' ಎಂಬ ಹೆಸರು ಬಂದದ್ದರ ಬಗ್ಗೆ ಊಹೆಯೊಂದನ್ನು ಮಾಡುತ್ತಾರೆ: 'ಅವಳು ಬಹುಶಃ ನಸುಗಪ್ಪು ಬಣ್ಣದವಳಿದ್ದಿರಬೇಕು. ನಾಯಕನ ಹೆಸರು ಕೃಷ್ಣ. ಮಹಾಭಾರತದ ನಾಯಕಿಯ ಹೆಸರು ಕೃಷ್ಣೆ. ಭಾರತೀಯ ಪುರಾಣಕಲ್ಪನೆಯಲ್ಲಿ ಪರಿಮಳ ಸೂಸುವಂಥ, ತುಂಬ ಚೆಲುವಾದ ಎರಡು ಪುಷ್ಪಗಳು ಕೃಷ್ಣ ಮತ್ತು ಕೃಷ್ಣೆ; ಒಬ್ಬ ಗಂಡಸು, ಇನ್ನೊಬ್ಬಳು ಹೆಂಗಸು. ಇಬ್ಬರೂ ಕಪ್ಪು... ಇಬ್ಬರದೂ ಸಖ–ಸಖಿ ಸಂಬಂಧ ಕೂಡ.'

'ಇಡೀ ಪ್ರಪಂಚದ ಪುರಾಣಗಳಲ್ಲಾಗಲಿ, ಇತಿಹಾಸದಲ್ಲಾಗಲಿ ಸಮಕಾಲೀನ ಪುರುಷರೆಲ್ಲರಿಗಿಂತಲೂ ಬುದ್ಧಿವಂತಳೂ ಕುಶಲಳೂ ಆಗಿರುವ ಒಬ್ಬಳೇ ಹೆಣ್ಣು ಪ್ರಾಯಶಃ ದ್ರೌಪದಿ. ಆಕೆಯನ್ನು ಕೃಷ್ಣನೊಡನೆ ಹೋಲಿಸಿ ನೋಡುವ ಪ್ರಶ್ನೆ ಏಳುವುದಿಲ್ಲ. ಏಕೆಂದರೆ ಆಳವಾದ ಜ್ಞಾನವುಳ್ಳವಳಾದ ಈಕೆ ಕೃಷ್ಣನಿಗೆ ಆತ್ಮೀಯಳಾಗಿದ್ದಳು, ಜೊತೆಗಾತಿಯಾಗಿದ್ದಳು. ಕೃಷ್ಣನ ಲೀಲಾಜೀವನದಲ್ಲಿ ರಾಧೆ ಇದ್ದಂತೆ, ಕ್ರಿಯಾಜೀವನದಲ್ಲಿ ದ್ರೌಪದಿ ನಾಯಕಿಯಾಗಿದ್ದಳು; ಪ್ರೇರಣೆಯಾಗಿದ್ದಳು. ಮಹಾಭಾರತದಲ್ಲಿ ಕೃಷ್ಣ–ಕೃಷ್ಣೆಯರು ಸಮಾನ ಯೋಗ್ಯತೆಯ ನಾಯಕದ್ವಯರು; ಘರ್ಷಣೆಯ ಛಾಯೆಯೂ ಕಾಣದ ಸಹವರ್ತಿಗಳು.'

'ದ್ರೌಪದಿಯ ಪ್ರಖರ ತೇಜಸ್ಸನ್ನು ಸೂಚಿಸುವ ಒಂದು ಪ್ರಸಂಗ'ವನ್ನು ಲೋಹಿಯಾ ಬಣ್ಣಿಸುತ್ತಾರೆ:

'ಸಾವಿನ ಮಡಿಲಲ್ಲಿದ್ದ ಭೀಷ್ಮಾಚಾರ್ಯರು ರಾಜನೀತಿಯನ್ನು ಬರೆಸುತ್ತಿದ್ದರು. ಭಾರತದಲ್ಲಷ್ಟೇ ಅಲ್ಲ, ಇದು ಒಂದರ್ಥದಲ್ಲಿ ಪ್ರಪಂಚದಲ್ಲಿಯೇ ರಾಜನೀತಿಶಾಸ್ತ್ರ ಕುರಿತ ಮೊದಲ ಗ್ರಂಥ. ಮಹಾಭಾರತದ 'ಶಾಂತಿಪರ್ವ'ದಲ್ಲಿ ಬಹುಶಃ ಕೌರವ, ಪಾಂಡವರೆಲ್ಲ ಒಟ್ಟಾಗಿ ಭೀಷ್ಮರಿಂದ ನೀತಿಯನ್ನು ಕಲಿಯುತ್ತಿದ್ದರು. ಈ ಪ್ರಸಂಗದಲ್ಲಿ ದ್ರೌಪದಿ ಒಮ್ಮೆಲೆ ನಕ್ಕಳು. ನನಗನ್ನಿಸುವಂತೆ ಕೊಂಚ ಜೋರಾಗಿಯೇ ನಕ್ಕಿರಬಹುದು! ಆಕೆ ನಿರ್ಭೀತ ಹೆಂಗಸು ನೋಡಿ! ಇಡೀ ಪ್ರಪಂಚದ ರಾಜನೀತಿಯನ್ನೆಲ್ಲ ವಿಶ್ಲೇಷಿಸಿ ಹೇಳುತ್ತಿದ್ದೇನೆ; ಜ್ಞಾನದಾನ ಮಾಡುತ್ತಿದ್ದೇನೆ ಎಂದು ಭೀಷ್ಮರು ವ್ಯರ್ಥ ಪಾಂಡಿತ್ಯ ಪ್ರದರ್ಶನ ಮಾಡುತ್ತಿದ್ದರು. ಆಗ ದ್ರೌಪದಿ ನಕ್ಕಳು.

'ಆ ನಗುವನ್ನು ಕಂಡು ಅರ್ಜುನನಿಗೆ ಎಷ್ಟು ಕೋಪ ಬಂತೆಂದರೆ, ಅವಳನ್ನು ಅಟ್ಟಿಸಿಕೊಂಡು ಹೊಡೆಯಲು ಓಡಿದ. ಅನೇಕ ದೃಷ್ಟಿಯಿಂದ ಅರ್ಜುನ ಕಾಡುಮನುಷ್ಯ! ಅವನು ಓಡತೊಡಗಿದಾಗ ಕೃಷ್ಣ ತಡೆದ; 'ತಾಳು ಅರ್ಜುನ. ದ್ರೌಪದಿ ಯಾಕೆ ನಕ್ಕಳು ಅಂತ ಕೇಳು' ಅಂದ.

'ಅರ್ಜುನನ ಪ್ರಶ್ನೆಗೆ ದ್ರೌಪದಿ ಹೇಳಿದಳು: 'ಇಡೀ ಜೀವನದುದ್ದಕ್ಕೂ ಈ ಜ್ಞಾನೋಪದೇಶದ ವಿರುದ್ಧ ಈ ಭೀಷ್ಮರು ನಡೆದಿದ್ದಾರೆ. ಈಗ ತಮ್ಮ ಬದುಕಿನ ಕೊನೆಯ ಕ್ಷಣಗಳಲ್ಲಿ ನೀತಿಬೋಧೆಗೆ ಇಳಿದಿದ್ದಾರೆ!'

ದ್ರೌಪದಿಯ ನಗುವಿಗೆ ಉತ್ತರಿಸುತ್ತಾ ಭೀಷ್ಮ ಮಾಡಿದ 'ವಿಚಿತ್ರ' ಬೋಧನೆಯೊಂದನ್ನು ಲೋಹಿಯಾ ನೆನೆಯುತ್ತಾರೆ:

'ಸರಿ, ನಗಲು ದ್ರೌಪದಿಗೆ ಪೂರ್ಣ ಹಕ್ಕಿದೆ. ಕೇಳಿ, ಈ ನಗುವಿನ ಬಗೆಗೇ ನಾನೊಂದು ಪಾಠ ಹೇಳಬಯಸುತ್ತೇನೆ' ಎಂದ ಭೀಷ್ಮರು ಒಂದು ಕತೆ ಹೇಳಿದರು: 'ಯಾವನೇ ಒಬ್ಬ ಅತಿ ಬುದ್ಧಿವಂತ ಸಿಂಹಾಸನದ ಮೇಲೆ ಕುಳಿತುಕೊಳ್ಳಕೂಡದು. ಯಾಕೆಂದರೆ, ಅವನು ಸಿಂಹಾಸನದ ಮೇಲೆ ಕುಳಿತುಕೊಂಡರೆ ಬುದ್ಧಿ ಮತ್ತು ಶಕ್ತಿ ಎರಡೂ ಸೇರಿಕೊಂಡು ಪ್ರಪಂಚವನ್ನು ನಾಶಮಾಡಿಬಿಡುತ್ತಾನೆ. ಈ ನಾಶದ ಪ್ರಮಾಣವನ್ನು ಕಲ್ಪಿಸುವುದೂ ಕಷ್ಟ. ಹೀಗಾಗಿ ನಾಶದ ಪ್ರಮಾಣವನ್ನು ಕಡಿಮೆ ಮಾಡಲು ಅತಿ ಬುದ್ಧಿವಂತನಲ್ಲದವನನ್ನೇ ರಾಜಸಿಂಹಾಸನದ ಮೇಲೆ ಕೂಡಿಸಬೇಕು.'

'ಇಂಥ ಎಷ್ಟು ನೀತಿಗಳಿವೆಯೋ ಅವೆಲ್ಲ ಏಕಮುಖಿಯಾಗಿವೆ' ಎನ್ನುವ ಲೋಹಿಯಾ ಸಮಕಾಲೀನ ರಾಜಕಾರಣಕ್ಕೆ ವಾಪಸಾಗುತ್ತಾರೆ: 'ಈ ಏಕಮುಖೀ ಕತೆಗಳನ್ನೇ ಅಂತಿಮ ಸತ್ಯವೆಂದು ಭಾವಿಸಿಕೊಂಡು, ಸಿಂಹಾಸನವನ್ನು ಮೂರ್ಖರಿಗೆ ನೀಡಬೇಕೆಂದು ತೀರ್ಮಾನಿಸಿದರೆ ಅದು ಸರಿಯಲ್ಲ. ರಾಜಕೀಯದ ಒಂದು ಮಹತ್ವದ ಗುರಿಯೇ ಸಿಂಹಾಸನದ ಮೇಲೆ ಕೂಡಿಸುವುದು. ವ್ಯಕ್ತಿಯೊಬ್ಬ ರಾಜಕೀಯ ಮಾಡಬಯಸುತ್ತಾನೆ; ಆದರೆ ಅಧಿಕಾರದ ಗದ್ದುಗೆಯ ಮೇಲೆ ತನಗೆ ಬೇಕಾದವರನ್ನು ಕೂಡಿಸಲು ಇಷ್ಟಪಡುವುದಿಲ್ಲ ಎಂದರೆ ಅದು ಮೂರ್ಖತನವಾಗುತ್ತದೆ.'

ಈ ಮಾತು ಜೆ.ಪಿ.ಯವರನ್ನು ಪ್ರಧಾನಿ ಹುದ್ದೆಯಲ್ಲಿ ಕೂಡಿಸಬಯಸಿದ ಲೋಹಿಯಾ ರಾಜಕಾರಣದ ಉದ್ದೇಶವನ್ನೂ ಸೂಕ್ಷ್ಮವಾಗಿ ಸೂಚಿಸುವಂತಿದೆ!

ಧರ್ಮರಾಯ ಪಗಡೆಯಾಟದಲ್ಲಿ ದ್ರೌಪದಿಯನ್ನು ಪಣವಾಗಿಟ್ಟು ಸೋತಾಗ ದ್ರೌಪದಿ ಮಾಡಿದ ವಾದ ಲೋಹಿಯಾಗೆ ನೆನಪಾಗುತ್ತದೆ: 'ತನ್ನನ್ನು ಪಣವನ್ನಾಗಿಟ್ಟು ಆಟವಾಡುವ ಯಾವ ಹಕ್ಕೂ ಯುಧಿಷ್ಠಿರನಿಗೆ ಇರಲಿಲ್ಲ. ಆತ ಸ್ವತಃ ಸೋತುಹೋಗಿದ್ದ. ಹೀಗೆ ಸೋತ ವ್ಯಕ್ತಿಗೆ ಬೇರೊಬ್ಬರನ್ನು ಪಣಕ್ಕೊಡ್ಡಿ ಜೂಜಾಡುವ ಅಧಿಕಾರ ಇಲ್ಲವೇ ಇಲ್ಲ.'

ದ್ರೌಪದಿಯ ವ್ಯಕ್ತಿತ್ವದಲ್ಲಿ 'ಅಸಾಧಾರಣ ಜ್ಞಾನ, ವ್ಯವಹಾರಪ್ರಜ್ಞೆ, ಎದೆಗುಂದದ ಧೈರ್ಯ, ಉತ್ತರಕ್ಕೆ ಖಚಿತ ಹಾಗೂ ನೇರ ಪ್ರತ್ಯುತ್ತರ ನೀಡುವ ಧೀಮಂತಿಕೆ... ಎಲ್ಲಾ ಗುಣಗಳೂ ಮೇಳೈಸಿವೆ' ಎನ್ನುವ ಲೋಹಿಯಾ, ದ್ರೌಪದಿ ಯಾಕೆ ತಮ್ಮ ಆಯ್ಕೆ ಎಂಬುದನ್ನು ಹೇಳುತ್ತಾರೆ:

'ದ್ರೌಪದಿಯ ಸದ್ಗುಣಗಳನ್ನು ಕಂಡೇ, ಭಾರತದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿಯೇ ಸಾವಿತ್ರಿಯೂ ಸೇರಿದಂತೆ ದ್ರೌಪದಿಯ ಎದುರು ನಿಲ್ಲುವ ಮಹಿಳೆ ಯಾರೂ ಇಲ್ಲವೆಂದು ನಾನು ಭಾವಿಸುತ್ತೇನೆ. ದ್ರೌಪದಿ ನಿಜವಾದ ಅರ್ಥದಲ್ಲಿ ಭಾರತದ ಪ್ರತೀಕ... ಪತಿವ್ರತಾ ಧರ್ಮವನ್ನು ಅನುಸರಿಸಿದಳು ಎಂಬ ಒಂದೇ ಒಂದು ಕಾರಣಕ್ಕಾಗಿ ಸಾವಿತ್ರಿಯನ್ನು ತಲೆಯ ಮೇಲೆ ಕೂರಿಸಿಕೊಂಡು ಓಡಾಡುವುದು ಸುಸಂಗತವಲ್ಲ. ನಮ್ಮ ಮನಸ್ಸು ಗೊಬ್ಬರದ ಗುಂಡಿಯಾಗಿರುವುದನ್ನು, ಮೌಢ್ಯದಿಂದ ಕೂಡಿರುವುದನ್ನು ಹಾಗೂ ಪುರುಷ ಪಕ್ಷಪಾತಿಯಾಗಿರುವುದನ್ನು ಇವೆಲ್ಲ ಹೇಳುತ್ತವೆ.'

* * *

ಲೋಹಿಯಾ ಮನಸ್ಸು ಪುರಾಣಲೋಕದ ವಿಶ್ಲೇಷಣೆಯ ಮೂಲಕವೂ ಕಣ್ಣೆದುರಿನ ವಾಸ್ತವಕ್ಕೆ ಮರಳುತ್ತಿರುತ್ತದೆ. ಪಾರ್ವತಿ ಶಿವನನ್ನು ವರಿಸಿದಾಗ ಪಾರ್ವತಿಯ ತಾಯಿ ನುಡಿದ ಕವಿತೆ ಎಲ್ಲ ಕಾಲದ ಮಹಿಳೆಯರ ಕಷ್ಟವನ್ನೂ ಪ್ರತಿಧ್ವನಿಸುವುದನ್ನು ಲೋಹಿಯಾ ತೋರಿಸುತ್ತಾರೆ:

ಹೆಣ್ಣೇಗೇಕೆ ಜನ್ಮಕೊಟ್ಟು ಭೂಮಿಯಲ್ಲಿ ಬ್ರಹ್ಮನು?
ಪರಾಧೀನ ಚೇತನಕ್ಕೆ ಇಲ್ಲ ಸ್ವಪ್ನದಲ್ಲು ನಲಿವು!

ಈ ಕವಿತೆಯ ಸಂದರ್ಭ: 'ಪಾರ್ವತಿಯ ಮದುವೆಯಾಗಿದೆ. ಮದುಮಗಳ ತಾಯಿಗೆ ತನ್ನ